ನಮಗೇನು ಕೊಟ್ಟಿದ್ದರು ಅವುಗಳಲ್ಲಿ 35 ಮನೆಗಳನ್ನು ಮಾಡಿದ್ದೆವು. ಅದು ತಡವಾಗಿಯಾಗಿದೆ. ಅದು ನಿಜ, ಆದರೆ ಈ ಸಲ 150 ಮನೆಗಳನ್ನು ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ 93 ಮಾರ್ಚಿಯೊಳಗೆ ಮಾಡುತ್ತೇವೆ. ನಿನ್ನೆಯಲ್ಲ ಮೊನ್ನೆ ಕ್ಯಾಬಿನೆಟ್ ನಲ್ಲಿ ಒಂದು ನಿರ್ಣಯವಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆಯವರಿಂದ ಸರ್ಕಾರಿ ಆದೇಶವನ್ನು ಧಿಕ್ಕರಿಸಿ ಖಾಲಿ ಜಾಗಗಳನ್ನು ವಿಲೇವಾರಿ.

1075- ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದೇ ಆದೇಶಗಳನ್ನು ಧಿಕ್ಕರಿಸಿ ಬೆಂಗಳೂರು ಮಹಾನಗರ ಪಾಲಿಕೆಯು ಖಾಲಿ ಇರುವ ಸ್ಥಳಗಳು ಮತ್ತು ಕಟ್ಟಡಗಳ ಭಾಗಗಳನ್ನು ವಿಲೇವಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಂತಹ ವಿಲೇವಾರಿ ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಉಪಾಧ್ಯಕ್ಷಣಿಯವರೆ, ಇದು ಜವಾಬ್ದಾರಿಯುತವಾಗಿ ಕೊಟ್ಟಂತಹ ಉತ್ತರವೋ ಅಥವಾ ಬೇಜವಾಬ್ದಾರಿಯಿಂದ ಕೊಟ್ಟ ಉತ್ತರವೋ ಎಂದು ನಾನು ಹೇಳಬೇಕಾಗುತ್ತದೆ. ಇದನ್ನು ನಾನುಬಹಳ ತೀವ್ರವಾಗಿ ಪ್ರತಿಭಟಿಸಬೇಕಾಗುತ್ತದೆ. ಅವರಿಗೆ ಯಾವಾಗ ನೇರವಾಗಿ ಉತ್ತರವನ್ನು ಕೊಡುವುದಕ್ಕೆ ಇಷ್ಟವಿರುವುದಿಲ್ಲೇ ಆಗ ಈ ತರಹ ಜವಾಬನ್ನು ಕೊಡುತ್ತಾರೆ. ನಾನೇ ಸಾಕಷ್ಟು ಕಾಗದವನ್ನು ನಗರಾಭಿವೃದ್ಧಿ ಮಂತ್ರಿಗಳಿಗೆ ಬರೆದಿದ್ದೇನೆ. ಕೆಲವು ಕಡೆ ಸ್ಪೇ ಕೊಟ್ಟಿದ್ದಾರೆ. ಅದು ಹಾಗೆಯೇ ಉಳಿದುಕೊಂಡಿದೆ. ಬೆಂಗಳೂರು ನಗರದಲ್ಲಿ ಈ ತರಹ ಅಕ್ರಮಗಳು ಬೆಂಗಳೂರು ಕಾರ್ಪೊರೇಷನ್ ನಿಂದ ಬಹಳ ನಡೆಯುತ್ತಿದೆ ಎಂದು ಗೊತ್ತಿದೆ ಗೊತ್ತಿದ್ದರೂ ಕೂಡ ಇದು ಗಮನಕ್ಕೆ ಬಂದಿಲ್ಲ. ಉತ್ತರ ಕೊಡುವುದು ಉದ್ಭವಿಸುವುದಿಲ್ಲವೆಂದರೆ ಅದಕ್ಕೆ ಈ ಸದನ ಏತಕ್ಕೆ ಇರಬೇಕು? ಅದಕ್ಕೆ ಒಬ್ಬರು ಏತಕ್ಕೆ ಮಂತ್ರಿಗಳು ಇರಬೇಕು. ಹೌಸಿಂಗ್ ಸೆಕ್ರೆಟರಿ ಏತಕ್ಕೆ ಇರಬೇಕು? ಕಳ್ಳತನವನ್ನು ಅಕ್ರಮವನ್ನು ಮುಚ್ಚಿರುವುದಕ್ಕೆ ಮಾಡುತ್ತಿದ್ದಾರೆಯೇ? ಈ ತರಹ ಜವಾಬನ್ನು ಏತಕ್ಕೆ ಕೊಡುತ್ತಿದ್ದಾರೆ. ನಾನು ಕಮೀಷನರ್ ರವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ, ಡೆಪ್ಯೂಟಿ ಕಮೀಷನರ್‌ರವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ.

ಉಪಾಧ್ಯಕ್ಷಣಿಯವರು : ತಾವು ನೇರವಾಗಿ ಪ್ರಶ್ನೆಯನ್ನು ಕೇಳಿ?

ಶ್ರೀ ಎ.ಕೆ. ಅನಂತಕೃಷ್ಣ : ಏನೂ ಇಲ್ಲ ಎಂದು ಉತ್ತರ ಕೊಟ್ಟಮೇಲೆ ಏನು ಮಾಡುವುದು. ಶಿವಾಜಿನಗರದ ಸ್ಟೇಡಿಯಂನಲ್ಲಿ ಗೇಟ್ ಕೊಟ್ಟಿದ್ದಾರೆ. ಟಿಕೇಟ್ ಕೌಂಟರನ ಜಾಗವನ್ನು ಕೊಟ್ಟಿದ್ದಾರೆ. ಅಲ್ಲಿ ಎರಡು ಟಾಯ್‌ಲೆಟ್ ಅನ್ನು ಕೊಟ್ಟಿದ್ದಾರೆ. ಮೂರು ಅಂಗಡಿಗಳು ಆಗಿ ಬಿಟ್ಟು ಇನ್ನೊಂದು ಕಡೆ ಒಂದು ಅಂಗಡಿಯನ್ನು ಹಾಕುತ್ತಿದ್ದಾರೆ. ಮಾಡಬಾರದೆಲ್ಲವನ್ನು ಮಾಡುತ್ತಿದ್ದಾರೆ ಎಂದು ನಾನು

ಪದೇ ಪದೇ ಹೇಳುತ್ತಿದ್ದರೂ ಆ ಕಮೀಷನರ್‌ಗೆ ಇದನ್ನು ತಡೆಹಿಡಿಯುವುದಕ್ಕೆ ಶಕ್ತಿ ಇಲ್ಲ. ಉಳಿದ ಅಧಿಕಾರಿಗಳಿಗೆ ಯಾವ ಶಕ್ತಿಯೂ ಇಲ್ಲ. ಕಳ್ಳತನ ಅಯೋಗ್ಯತನ ಅಕ್ರಮ ನಡೆಯುತ್ತಿರುವು ಮುಚ್ಚಿಸುವುದಕ್ಕಾಗಿಲ್ಲ?

ಶ್ರೀ ಚೌಡರೆಡ್ಡಿ : ಮಾನ್ಯ ಉಪಾಧ್ಯಕ್ಷಣಿಯವರೇ, ಅವರು ಪ್ರಶ್ನೆಯನ್ನು ಕೇಳಿರುವುದು ಇರುವ ಸ್ಥಳಗಳನ್ನು ಮತ್ತು ಕಟ್ಟಡ ಭಾಗಗಳನ್ನು ವಿಲೇವಾರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಇದರಲ್ಲಿ 176(6) ಆಫ್ ದಿ ಕೆ.ಎಂ.ಸಿ.ಆಕ್ಟ್ ಪ್ರಕಾರ Commissioner can lease the immovable property for 11 months, Standing Committee up to 3 years, Council up to 5 years. Government can lease the immovable property above 5 years. ಎಂದು ಇದೆ. ನಮಗೆ ಅವರು ಹೇಳಿದ ಪ್ರಕಾರ, ಅದು ನಮ್ಮ ಗಮನಕ್ಕೆ ಬಂದಿಲ್ಲ. ಮಾನ್ಯ ಅನಂತಕೃಷ್ಣ ರವರು ಮೊದಲು ಮೇಯರ್ ಆಗಿದ್ದರು. ಅವರು ಬಹಳ ಬಹಳ ವಿಚಾರಗಳನ್ನು ತಿಳಿದುಕೊಂಡಿದ್ದಾರೆ. ಕೆಲವೊಂದು ವರ್ಕ್ಸ್ ಬಗ್ಗೆ ಬರೆದಿದ್ದಾರೆ. ಪೀಸ್‌ವರ್ಕ್ ಸಿಸ್ಟಂನಲ್ಲಿ ಕಾನೂನು ಬಿಟ್ಟು ಮಾಡುತ್ತಿದ್ದಾರೆಂದು ಬರೆದಿದ್ದಾರೆ. ಅದಕ್ಕೆ ಈಗಾಗಲೇ ಹಿಂದೆ ಇದ್ದಂತಹ ಮಿನಿಸ್ಟರ್ ಕೂಡ ಸ್ಟೇ ಮಾಡಿದ್ದಾರೆ. ಗೌರ್ನಮೆಂಟ್ ಆರ್ಡರ್ ಕೂಡ ಪೀಸ್‌ವರ್ಕ್ ಸಿಸ್ಟಂನಲ್ಲಿ ಮಾಡಬಾರದೆಂದು ಇದೆ.

ಶ್ರೀ ಎ.ಕೆ. ಅನಂತಕೃಷ್ಣ : ಅದನ್ನು ನಾನು ತೆಗೆದುಕೊಳ್ಳುತ್ತೇನೆ. ಈ ಪ್ರಶ್ನೆಯನ್ನು ಇಲ್ಲಿ ಎತ್ತಿರುವುದರಿಂದ ಆ ವಿಷಯವನ್ನು ಕೂಡ ಇಲ್ಲಿ ಚರ್ಚೆ ಮಾಬೇಕಾದದ್ದು. ಅತ್ಯಾವಶ್ಯಕವಾಗಿದೆ. ಬೆಂಗಳೂರು ನಗರ ಪಾಲಿಕೆಯವರಿಗೆ ಸರ್ಕಾರದ ಆದೇಶ ಇದೆ. ಪಾರ್ಕ್‌ಗಳಲ್ಲಿ, ಆಟದ ಮೈದಾನಗಳಲ್ಲಿ ಯಾವುದೇ ಭಾಗವನ್ನು ಯಾರಿಗೋ ಕೊಡಬಾರದೆಂದು ಆದೇಶ ಇದೆ. ಆ ಆದೇಶದ ತದ್ವಿರುದ್ಧವಾಗಿ ಸ್ಟ್ಯಾಂಡಿಂಗ್ ಕಮಿಟಿಯವರು ಕೊಟ್ಟರೆ ಇಡೀ ಕಾರ್ಪೊರೇಷನ್ ಕೌನ್ಸಿಲ್ ನಿಂದ ಆದೇಶ ಉಲ್ಲಂಘನೆ ಆದ ಹಾಗೆ ಆಯಿತು?

Madam Deputy Speaker : Please allow the Minister to say what he wants to say.

ಶ್ರೀ ಚೌಡರೆಡ್ಡಿ : ಈ ಕಾನೂನು ಪ್ರಕಾರ ಬಿಲ್ಡಿಂಗ್‌ನಲ್ಲಿ 70 ಕೇಸಸ್‌ನಲ್ಲಿ ಕೊಟ್ಟಿದ್ದಾರೆ. ಅದು ಯಾವುದೆಂದರೆ ಆಸ್ಪತ್ರೆ, ಡಿಸ್‌ಪೆನ್ಸರಿಸ್, ರೀಡಿಂಗ್ ರೂಮ್ಸ್ ಅಂಡ್ ಕಲ್ಚರಲ್ ಹಾಲ್ಸ್ ಇದಕ್ಕೆ ಮೊದಲಿನಿಂದಲೂ ಕೊಟ್ಟಕೊಂಡು ಬಂದಿದ್ದಾರೆ. ವೇಕೆಂಟ್ ಲ್ಯಾಂಡ್ ನ್ನು 842 ಕೇಸಸ್‌ನಲ್ಲಿ ಮಾತ್ರ ಕೊಟ್ಟಿದ್ದಾರೆ. ಇದು ನಮ್ಮ ಸರ್ಕಾರದ ಗಮನಕ್ಕೆ ಬಂದಿದೆ. ಇನ್ನು ಏನಾದರೂ ಸ್ಪೆಸಿಫಿಕ್ ಆಗಿ ಕೊಟ್ಟರೆ ಅದನ್ನು ಯಾವ ರೀತಿ ಕಾನೂನು ಪ್ರಕಾರ ಆಕ್ಷನ್ ತೆಗೆದುಕೊಳ್ಳಬೇಕೋ ಅದನ್ನು ನಿರ್ದಾಕ್ಷಿಣ್ಯವಾಗಿ ಆಕ್ಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ : ನನ್ನ ಪ್ರಶ್ನೆಗೆ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ನಾನು ಹೇಳುತ್ತಿರುವುದೇನೆಂದರೆ, ಶಿವಾಜಿನಗರದ ಕಾರ್ಪೋರೇಷನ್ ಸ್ಟೇಡಿಯಂ ಏನಿದೆ, ಆ ಸ್ಟೇಡಿಯಂ ಗೇಟ್‌ನಿಂದ ಹಿಡಿದು ಒಳಾಂಗಣವೆಲ್ಲವೂ ಆಟದ ಮೈದಾನದ ಸ್ಟೇಡಿಯಂ ಆಗಿದೆ. ಗೇಟಿನ ಒಂದು ಭಾಗದಲ್ಲಿ 30x60 ಅಳತೆಯ ಜಾಗವನ್ನು

ಕೊಟ್ಟಿದ್ದಾರೆ. ಟಿಕೇಟ್ ಕೌಂಟರ್ ಅನ್ನು ಸಹ ಕೊಟ್ಟಿದ್ದಾರೆ. ಜನರು ಆಟದ ಮೈದಾನದಲ್ಲಿ ಆಟವಾಡಿ ಹೊರಗಡೆ ಬರಬೇಕಾದರೆ ಇದ್ದ ಗೇಟನ್ನೂ ಸಹ ಕೊಟ್ಟಿದ್ದಾರೆ. ಅಲ್ಲಿನ ಪ್ಯಾಸೇಜ್ ಎಲ್ಲವನ್ನೂ ಕೊಟ್ಟಿದ್ದಾರೆ. ಎರಡು ಭಾಗದಲ್ಲಿದ್ದಂಥ ಟಿಕೇಟ್ ಕೌಂಟರ್ ಅನ್ನು ಕೊಟ್ಟಿದ್ದಾರೆ. ಆಟವಾಡುವ ಮಕ್ಕಳಿಗೆಂದು ಇದ್ದ ಎರಡು ಟಾಯ್ಲೆಟ್ ಅನ್ನು ಸೇರಿಸಿ ಕೊಟ್ಟಿದ್ದಾರೆ. ಇವೆಲ್ಲವುಗಳನ್ನು ಅಕ್ರಮವಾಗಿ ಕಟ್ಟಿದ್ದಾರೆ. ಸರ್ಕಾರದೇ ಆದೇಶಕ್ಕೆ ತದ್ವಿರುದ್ಧವಾಗಿ ಉಲ್ಲಂಘನೆ ಮಾಡಿ ಕೊಟ್ಟಿದ್ದಾರೆ. ಅಲ್ಲದೆ, ಆ ಜಾಗದಲ್ಲಿ ಕಟ್ಟಡವನ್ನು ಕೊಡಬೇಕಾದರೆ, ಆ ಕಟ್ಟಡವನ್ನು ದುರಸ್ತಿ ಮಾಡಿ, ರಿನೋವೇಟ್ ಮಾಡಿ ಅಂಗಡಿಗಳನ್ನು ಬದಲಾಯಿಸಿಕೊಂಡಿದ್ದಾರೆ. ಕಾರ್ಪೊರೇಷನ್ನಿಂದ ಲೈಸೆನ್ಸ್ ಪಡೆಯದೆ ಕಾನೂನು ಉಲ್ಲಂಘಿಸಿದ್ದಾರೆ. ಮೇಯೋ ಹಾಲ್ ಕಾಂಪೌಂಡಿನಲ್ಲಿ ಹೋಟೆಲ್‌ಗೆ ಜಾಗಕೊಟ್ಟಿದ್ದಾರೆ. ಈ ರೀತಿ ಬಿಟ್ಟರೆ ನಾಳೆ ದಿವಸ ಬೆಂಗಳೂರಿನಲ್ಲಿರತಕ್ಕ ಕಾರ್ಪೊರೇಷನ್ ಹೆಡ್ ಆಫೀಸ್ ಸಹ ಕೊಟ್ಟು ಬಿಡುತ್ತಾರೆ.

ಶ್ರೀ ಚೌಡರೆಡ್ಡಿ : ಕಾರ್ಪೊರೇಷನ್‌ಗೆ ಲಂಗು ಲಗಾಮು ಏನೂ ಇಲ್ಲ. ಇದರ ಬಗ್ಗೆ ತಾವು ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಕೊಡುವುದಾದರೆ ಖಂಡಿತವಾಗಿಯೂ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆಂದು ತಮಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀಎ.ಕೆ. ಅನಂತಕೃಷ್ಣ : ಮಾನ್ಯ ಸಚಿವರು ಕಾರ್ಪೊರೇಷನ್ ಗೆ ಲಂಗು ಲಗಾಮು ಇಲ್ಲವೆನ್ನುವ ಮಾತನ್ನು ಹೇಳಿದರು. ಈ ಮಾತನ್ನು ಹೇಳಿದ ನಂತರ, ಈ ವಿಚಾರವನ್ನು ಸದನದಲ್ಲಿ ಅಷ್ಟಕ್ಕೆ ಬಿಡುವುದು ಸರಿಯಲ್ಲ. ಕಾರ್ಪೊರೇಷನ್ ಗೆ ಲಂಗು ಲಗಾಮು ಇಲ್ಲದಿದ್ದರೆ ಅದನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಶಕ್ತಿ ಸರ್ಕಾರಕ್ಕಿಲ್ಲವೇ ?

ಉಪಾಧ್ಯಕ್ಷಣಿಯವರು : ಇದು ಪ್ರಶ್ನೋತ್ತರ ಕಾರ್ಯಾಚರಣೆಯಾಗಿದ್ದು ತಮಗೆ ಹೆಚ್ಚು ಸಮಯ ಕೊಟ್ಟರೆ ಇತರ ಸದಸ್ಯರುಗಳು ಇದರ ಬಗ್ಗೆ ಅಕ್ಷೇಪಣೆ ಮಾಡುತ್ತಾರೆ. ಆದುದರಿಂದ ಈ ವಿಷಯವನ್ನು ಬೇರೆ ರೂಪದಲ್ಲಿ ಕಳುಹಿಸಿಕೊಟ್ಟರೆ ವಿಚಾರ ಮಾಡಬಹುದು.

ಶ್ರೀ ಎ.ಕೆ. ಅನಂತಕೃಷ್ಣ ಅವರಿಗೆ ಕಾನೂನು ಉಲ್ಲಂಘನೆ ಮಾಡಿ ಕೊಟ್ಟಿರತಕ್ಕಂಥ ಲೀಸ್ ಅನ್ನು ಕ್ಯಾನ್ಸೆಲ್ ಮಾಡುತ್ತಾರೆಯೇ ? ಇದು ಅಕ್ರಮವಾಗಿ ಕೊಟ್ಟಿದ್ದಾರೆ, ಅವರ ಮೇಲೆ ಕ್ರಮ ತೆಗದುಕೊಳ್ಳುತ್ತಾರೆಯೇ ಎಂಬುದನ್ನು ತಿಳಿಸಬೇಕು.

ಉಪಾಧ್ಯಕ್ಷಣಿಯವರು : ಸಂಬಂಧಪಟ್ಟವರರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳಲ್ಲಿ ಊಟದ ವೆಚ್ಚದ ಮೊತ್ತದ ಹೆಚ್ಚಳ.

706-ಶ್ರೀ ಅಂಜನ ಮೂರ್ತಿ (ನೆಲಮಂಗಲ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ವಿದ್ಯಾರ್ಥಿನಿಲಯಗಳಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ತುಂಬಾ ಕಡಿಮೆಯೆಂಬುದು ಸರ್ಕಾರವರ ಗಮನಕ್ಕೆ ಬಂದಿದೆಯೇ ?